# *ಪುರಂದರ ದಾಸರ ಮುಂಡಿಗೆಗಳು*

೧.

- **ತಾರಕ್ಕ ಬಿಂದಿಗೆ ನಾ ನೀರಿಗ್‌ಹೋಗುವೆ ತಾರೆ ಬಿಂದಿಗೆಯ ॥ ಪ ॥**

ಬಿಂದಿಗೆ ಒಡೆದರೆ ಒಂದೇ ಕಾಸು ತಾರೇ ಬಿಂದಿಗೆಯ ॥ಅ.ಪ॥

ರಾಮನಾಮನೆಂಬ ರಸವುಳ್ಳನೀರಿಗೆ ತಾರೇ ಬಿಂದಿಗೆಯ ।

ಕಾಮಿನಿಯರ ಕೂಡೆ ಏಕಾಂತವಾದೇನು ತಾರೇ ಬಿಂದಿಗೆಯ ॥ ೧ ॥

ಗೋವಿಂದಯೆಂಬುವ ಗುಣವುಳ್ಳ ನೀರಿಗೆ ತಾರೇ ಬಿಂದಿಗೆಯ

ಆವಾವ ಪರಿಯಲ್ಲಿ ಅಮೃತದ ನೀರಿಗೆ ತಾರೇ ಬಿಂದಿಗೆಯ ॥ ೨ ॥

ಬಿಂದುಮಾಧವನ ಘಟಕ್ಕೆ ಹೋಗುವೆ ತಾರೇ ಬಿಂದಿಗೆಯಾ

**ಪುರಂದರ ವಿಠಲ**ಗೆ ಅಭಿಷೇಕ ಮಾಡುವೆ ತಾರೇ ಬಿಂದಿಗೆಯ ॥ ೩ ॥

- **ಮಾಡು ಸಿಕ್ಕದ್ದಲ್ಲ ಮಾಡಿನ ಗೂಡು ಸಿಕ್ಕದಲ್ಲ**

ಜೋಡು ಹೆಂಡಿರಂಜಿ ಓಡಿಹೋಗುವಾಗ

ಗೋಡೆ ಬಿದ್ದು ಬಯಲಾಯಿತಲ್ಲ ॥ ಪ ॥

ಎಚ್ಚರಗೊಳಲಿಲ್ಲ ಮನವೆ, ಹುಚ್ಚನಾದೆನಲ್ಲ

ಅಚ್ಚಿನೊಳಗೆ ಮೆಚ್ಚು ಮೆಚ್ಚಿನೊಳಗೆ ಅಚ್ಚು

ಕಿಚ್ಚೆದ್ದು ಹೋಯಿತಲ್ಲ ॥ ೧ ॥

ಮುಪ್ಪು ಬಂದಿತಲ್ಲ ಪಾಯಸ ತಪ್ಪದೆ ಉಣಲಿಲ್ಲ

ತುಪ್ಪದ ಬಿಂದಿಗೆ ತಿಪ್ಪೆ ಮೇಲೆ ದೊಪ್ಪನೆ ಬಿತ್ತಲ್ಲ ॥ ೨ ॥

ಯೋಗವು ಬಂತಲ್ಲ, ಬದುಕು ವಿಭಾಗವಾಯಿತಲ್ಲ

ಭೋಗಿಶಯನ **ಶ್ರೀ ಪುರಂದರವಿಠಲನ** ಆಗ ನೆನೆಯಲಿಲ್ಲ ॥ ೩ ॥

- **ಸುಳ್ಳು ನಮ್ಮಲ್ಲಿಲ್ಲವಯ್ಯಾ ಸುಳ್ಳೆ ನಮ್ಮನೆ ದೇವರು** ॥ ಪ ॥

ಇಲಿಯು ಬಲೆಯ ಚಾಚುದ ಕಂಡೆ

ಬೆಕ್ಕು ಭಕರಿ ಮಾಡೋದ ಕಂಡೆ

ಮೆಕ್ಕೇಕಾಯಿ ಕಂಡೆನವ್ವಾ ತೆಕ್ಕೆಗಾತರ ॥ ೧ ॥

ಕಪ್ಪೆ ಪಾತರ ಕುಣಿಯುದ ಕಂಡೆ

ಎಡಿ ಮುದ್ದಳೆ ಬಡಿವುದ ಕಂಡೆ

ತೊಂಡೆಕಾಯಿ ಕಂಡೇನವ್ವ ಹಂಡೆಗಾತರ ॥ ೨ ॥

ಅರಿಷಿಣ ಪುಡಿಯ ಬಿತ್ತಿದ ಕಂಡೆ

ಗಸೆಗಸೆಯನ್ನು ಎಣಿಸುದುದ ಕಂಡೆ

**ಪುರಂದರವಿಠಲನ** ಪಾದವ ಕಂಡೆ ಪರ್ವತಗಾತರ ॥ ೩ ॥

- **ವಹವ್ವಾರೆ ಮೆಣಸಿನಕಾಯಿ**

ಒಣರೊಟ್ಟಿಗೆ ತಂದೆನೊ ತಾಯಿ ॥

ಹುಟ್ಟುತಲಿ ಹಸಿರಾಗುತ ಕಂಡೆ

ನಟ್ಟನಡುವೆ ಕೆಂಪಾಗುತ ಕಂಡೆ

ಕಟ್ಟೆರಾಯನ ಬಹುರುಚಿಯೆಂಬೆ ॥ ೧ ॥

ಒಂದೆರಡೆರದರೆ ಬಹುರುಚಿಯೆಂಬೆ

ಮೇಲೆರಡೆರೆದರೆ ಬಹು ಖಾರೆಂಬೆ ಅದೂ

ಎರಡರೆದರೆ ಅತಿ ಖಾರೆಂಬೆ ॥ ೨ ॥

ಬಡವರಿಗೆಲ್ಲ ನಿನ್ನಾಧಾರ

ಅಡಿಗೆ ಊಟಕೆ ನಿನ್ನಾಸಾರ

ಬಾಯಲಿ ಕಡಿದರೆ ಬೆಂಕಿಯ ಖಾರ

**ಪುರಂದರ ವಿಠಲನ** ನೆನೆಯೋದು ಭಾರ ॥ ೩ ॥

- **ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ**

ಎರಡು ತುಂಬಿತು ಒಂದು ತುಂಬಲೇ ಇಲ್ಲ ॥ ಪ ॥

ತುಂಬಲಿಲ್ಲದ ಕೆರೆಗೆ ಬಂದರು ಮೂವರು ವಡ್ಡರು

ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ॥ ೧ ॥

ಕಾಲಿಲ್ಲದ ಒಡ್ಡಗೆ ಕೊಟ್ಟರು ಮೂರು ಎಮ್ಮೆಗಳ

ಎರಡು ಬರಡು ಒಂದಕ್ಕೆ ಕರುವೇ ಇಲ್ಲ ॥ ೨ ॥

ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ

ಎರಡು ಸವಕಲು ಒಂದು ಸಲ್ಲಲೇ ಇಲ್ಲ ॥ ೩ ॥

ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು

ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ ॥ ೪ ॥

ಕಣ್ಣಿಲ್ಲದ ನೋಟಗಾರರಿಗೆ ಕೊಟ್ಟರು ಮೂರು ಊರುಗಳ

ಎರಡು ಹಾಳು ಒಂದಕ್ಕೆ ಒಕ್ಕಲೇ ಇಲ್ಲ ॥ ೫ ॥

ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು

ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ ॥ ೬ ॥

ಕೈಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ

ಎರಡು ಒಡಕು ಒಂದಕೆ ಬುಡವೇ ಇಲ್ಲ ॥ ೭ ॥

ಬುಡವಿಲ್ಲದ ಮಡಿಕೆಗೆ ಹಾಕಿದರು ಮೂರಕ್ಕಿಕಾಳ

ಎರಡು ಹಂಜಕ್ಕಿ ಒಂದಕ್ಕಿ ಬೇಯಲೇ ಇಲ್ಲ ॥ ೮ ॥

ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು

ಇಬ್ಬರು ಉಣ್ಣರು ಒಬ್ಬಗೆ ಹಸಿವೇ ಇಲ್ಲ ॥ ೯ ॥

ಹಸಿವಿಲ್ಲದ ನೆಂಟಗೆ ಕೊಟ್ಟರು ಮೂರು ಟೊಣಪೆಗಳ

ಎರಡು ಸೊಂಕವು ಒಂದು ತಾಕಲೇ ಇಲ್ಲ ॥ ೧೦॥

ತಾಕಲಿಲ್ಲದ ಟೊಣಪೆಯ ತಾಕಿಸಿ ಸದ್ಗತಿಯ

ನೀಯಬೇಕು **ಪುರಂದರ ವಿಠಲ** ನೀನು ॥ ೧೧ ॥

## • ಪುರಂದರ ದಾಸರ ಬುಡುಬುಡಿಕೆ ಮುಂಡಿಗೆ :

ಜಯವದೆ ಜಯವದೆ ಈ ಮನೆತನಕೆ

ಬಿಡು ಬಿಡು ಬಿಡು ಮನದನ ಚಿಂತೆ ॥ ಪ ॥

ಶುಕನೆಂಬ್ ಹಕ್ಕಿ ಹೇಳುತದಪ್ಪ ಜಗವೆಂಬೋ ಗಿಡ ಹುಟ್ಟೈತಣ್ಣ

ಹಣ್ಣುಗಳೆರಡು ಐದಾವಪ್ಪ ಮೂರು ಬುಡದ ಗಿಡ ಕೇಳಣ್ಣ ॥ ೧ ॥

ಹಣ್ಣಿನ ಒಳಗೆ ನಾಲ್ಕು ರಸವು ಐದು ದೊಡ್ಡ ಹರೆ ಕಾಣಪ್ಪ

ಆರು ಬಗೆಯ ಸ್ವರೂಪ ಕೇಳು ಏಳು ಬಗೆಯ ತೊಗಟುಂಟಣ್ಣ ॥ ೨ ॥

ಸಣ್ಣಗರಿಗಳು ಎಂಟೈದಾವೆ ಅಕ್ಷವು ಇದಕ್ಕೆ ಒಂಭತ್ತೈತೆ

ಎಲೆಗಳು ಹತ್ತು ಐದಾವಪ್ಪ ಒಂದೇ ಹಕ್ಕಿ ಕಣ್ತಿಂತೈತೆ ॥ ೩ ॥

ಮತ್ತೊಂದ್ ಹಕ್ಕಿ ನೋಡುತದಪ್ಪ ಹಣ್ತಿಂದ್ ಹಕ್ಕಿ ಬಡವಾಗೈತೆ

ತಿನ್ನದ ಹಕ್ಕಿ ಬಲಿತೈತಣ್ಣ ಸುಳ್ಳಲ್ಲ ನೀ ಕೇಳೋ ತಮ್ಮ ॥ ೪ ॥

ದ್ವಾಸುಪರ್ಣದ ಶ್ರುತಿಯಲ್ಲೈತೆ ಒಂದೇ ಕುಲದ ಹಕ್ಕ್ಯಲ್ಲಣ್ಣ

ಒಂದೇ ಕುಲವೆಂದು ತಿಳಿಯಲಿ ಬೇಡ ತಿಳಿದರೆ ನಿಮಗೆ ಕೇಡಾದೀತು ॥ ೫ ॥

ಹಳೇ ವಸ್ತ್ರವ ಬಿಸಾಡಣ್ಣ ಹೊಸ ವಸ್ತ್ರವ ನಿಮಗೆ ದೇವರು ಕೊಟ್ಟ್ಯಾನು

ಹಕ್ಕಿಯರಸ ಆಡಿದ ಮಾತು ಉತ್ತಮ ಮಾರ್ಗವ ಹಿಡಿಯೋ ತಮ್ಮ ॥ ೬ ॥

ಮಾರ್ಗವ ಕಟ್ಟಿ ಸುಲಿಯುತ್ತಾರೆ ಗಿರಿ ದುರ್ಗಗಳು ಐದಾವಪ್ಪ

ಮಾರನೆಂಬ ಕಳ್ಳೈದಾನೆ ಸಮೀರನಾದರೆ ಹೊರಟ್‌ಹೋಗ್ತಾನೆ ॥ ೭ ॥

ಪುರಂದರನಾದರೆ ಬಿಡುವೋನಲ್ಲ ಸುರಜ್ಯೇಷ್ಠನ ಸಂಗತಿ ಹಿಡಿಯೋ

ಕಣ್ಣು ಮೂಗು ಕಿವಿ ನಾಲಿಗೆಯಪ್ಪ ಒಂದೊಂದೊಬ್ಬರ ಕೊಂದಾದವಣ್ಣ ॥ ೮ ॥

ಕುರಂಗ ಮಾತಂಗ ಪತಂಗ ಕೇಳೋ ಭೃಂಗ ಮೀನಾ ಹತವಾದವಣ್ಣ

ಜ್ಞಾನ ಭಕ್ತಿಯೆಂಬ ಮಾರ್ಗವ ಎರಡು ದೊಡ್ಡ ಮಾರ್ಗವ ಹಿಡಿಬೇಕಣ್ಣ ॥ ೯ ॥

ದೊಡ್ಡ ಸಂಗತಿ ಬರುವ್ಹೋತನಕ ಎರಡೂ ಮನೆಯಲ್ಲಿರಬೇಕಣ್ಣ

ದಾನದ ಕೈಯ ತೋರಿಸಬೇಕು ಅದರಿಂದ ನದಿಯ ದಾಟುತಿಯಪ್ಪ

ನಿನ್ ಯೋಗ್ಯತೆ ತಿಳಿದ ಮೇಲೆ ಪುರಂದರ ವಿಠ್ಠಲ ಸ್ಥಳ ಕೊಟ್ಟಾನು ॥ ೧೦ ॥

ಇದರಲ್ಲಿ ಮೇಲೆ ಹೇಳಿದಂತೆ ಯಾರು ಆಚರಣ್ ಮಾಡುವರೋ ಅವರ ಮನೆತನಕ್ಕೆ ನಿಸ್ಸಂದೇಹವಾಗಿ ಜಯವಿರುತ್ತದೆ. ಈ ವಿಷಯವನ್ನು ಹೇಳಿದವರು ಭಾಗವತಾಚಾರ್ಯರಾದ ಶುಕಾಚಾರ್ಯರು. ಅಮೃತದ್ರವಯುಕ್ತವಾದದ್ದು ಅವರ ಮಾತು. "ಶುಕಮುಖಾತ್ ಅಮೃತದ್ರವಸಂಯುತಮ್"

ಭಾಗವತ ದಶಮಸ್ಕಂಧದ "ಗರ್ಭಸ್ತುತಿ"ಯಲ್ಲಿ ಬ್ರಹ್ಮಾದಿ ದೇವತೆಗಳು ದೇವಕಿಯ ಗರ್ಭದಲ್ಲಿದ್ದ ಭಗವಂತನನ್ನು ಸ್ತುತಿ ಮಾಡಿರುವುದೇ ಇಲ್ಲಿನ ವಿಷಯ.

## ೭. ಪುರಂದರ ದಾಸರ ದಶಾವತಾರ ಮುಂಡಿಗೆ :

ಕೇಳಿದೆ ನಿನ್ನಯ ಸುದ್ದಿ ಕೇಳಿದೆ ॥ ಅ ॥

ನೀರೊಳು ಮುಳುಗಿದೆಯಂತೆ ದೊಡ್ಡ

ಭಾರಗಿರಿಯ ಪೊತ್ತೆಯಂತೆ

ಗೆಡ್ಡೆಗೆಣಸು, ಬೇರು ಮೆದ್ದೆಯಂತೆ, ಆಹ

ಮೂರೆರಡರಿಯದ ಪೋರನ ಮಾತಿಗೆ

ಘೋರ ದಾನವನ ಸಂಹಾರ ಮಾಡಿದೆಯಂತೆ ॥ ೧ ॥

ನಾರಿಯೊಬ್ಬಳ ಪತ್ತೆಯಂತೆ, ಹೆತ್ತ

ನಾರಿಯೊಬ್ಬಳನು ಕೊಯ್ದೆಯಂತೆ, ನಿನ್ನ

ನಾರಿ ಚೋರನ ಕೊಂದೆಯಂತೆ, ಆಹ

ಊರ ನಾರಿಯರಿಂದ ಬೈಸಿಕೊಳ್ಳುತ, ಪರ
ನಾರಿಯರಭಿಮಾನ ಗಾರುಮಾಡಿದಿಯಂತೆ ॥ ೨ ॥
ತುರುಗ ರಾವುತನಾದೆಯಂತೆ, ನಿನ್ನ
ಕರದಿ ಕಡೆಗೋಲು ನೇಣಂತೆ, ನಿನಗೆ,
ಸರಿ ಧರೆಯೊಳಗಿಲ್ಲವಂತೆ, ಆಹ
ವರದ ಪುರಂದರ ವಿಠಲ ನಿನ್ನಯ
ಪರಿ ಪರಿ ಮಹಿಮೆಯ ಹರುಶದಿಂದಲಿ ನಾ ॥ ೩ ॥

## ೮. ಏನಾದರೂ ಒಂದಾಗಲಿ, ನೂರೆಂಟು ದೇವರು –

ಏನಾದರೂ ಒಂದಾಗಲಿ, ನೂರೆಂಟು ದೇವರು
ಮೊರತುಂಬ ಕಲ್ಲೇ, ಅತ್ತೆಯ ಕಣ್ಣು ಹೋಗಲಿ
ಮಾವನ ಕಾಲು ಮುರಿಯಲಿ, ಹಿತ್ತಲು ಗೋಡೆ ಬೀಳಲಿ
ಕಾಳಕತ್ತಲೆ ಬಂದು ಕವಿಯಲಿ ಹರಿಯೇ ॥ ೧ ॥

ಮನೆಯ ಗಂಡ ಮಾಯವಾಗಲಿ
ಉಣಬಂದ ಮೈದುನ ವರಗಲಿ
ಮನಿ ನೆರೆಮನೆ ಹಾಳಾಗಲಿ
ಮತ್ತೆ ಅತ್ತಿಗೆ ನಾದಿನಿ ಮಡಿಯಲಿ,
ಹರಿಯೇ ಕಂದನ ಕಣ್ಣುಮುಚ್ಚಲಿ
ಚಂದ್ರಗೆ ಹಾವು ಕಚ್ಚಲಿ
ಚಂದ್ರಗೆ ಹಾವು ಕಚ್ಚಲಿ
ಈ ದ್ವಂದಾರ್ಥಗಳು ಬಿಚ್ಚಲಿ ಪುರಂದರವಿಠಲ ಮೆಚ್ಚಲಿ ಹರಿಯೇ ॥ ೨ ॥

## ಪುರಂದರದಾಸರ ಒಗಟಿನ ಮುಂಡಿಗೆ

ಬಲ್ಲವರು ಪೇಳಿರಿ ಸೊಲ್ಲನೆಲ್ಲ

ಪುಲ್ಲನಾಭನ ಚರಣಶರಣ ಜನರೆಲ್ಲ । ಪ ।

ನೀರೊಳಗೆ ಸಂಚರಿಸುವುದು ಮತ್ಸ್ಯಾವತಾರವಲ್ಲ

ಭಾರವನು ಪೊತ್ತಿಹದು ಕೂರ್ಮಾವತಾರವಲ್ಲ

ಕೋರೆ ದಾಡೆಗಳುಂಟು ವರಾಹ ತಾನಲ್ಲ

ಘೋರ ಬಾಯ್ದ್ದೆರೆದಿರುವುದು ನರಸಿಂಹನಲ್ಲ

ಬಂದವರ ಬೇಡುವುದು ವಾಮನಾವತಾರವಲ್ಲ

ತಂದೆ ನುಡಿ ಕೇಳುವುದು ಭಾರ್ಗವನು ತಾನಲ್ಲ

ಸಿಂಧುವನು ದಾಟುವುದು ಶ್ರೀರಾಮ ತಾನಲ್ಲ

ಬಂದು ಮಡುವಿನಲ್ಲಿ ದುಮುಕುವುದು ಶ್ರೀಕೃಷ್ಣಲ್ಲ

ಬತ್ತಲೆ ನಿಂತಿಹುದು ಬೌದ್ಧಾವತಾರವಲ್ಲ

ಉತ್ತಮತೇಜಿ ಏರಿಹುದು ಕಲ್ಕಿಯಲ್ಲ

ಭಕ್ತವತ್ಸಲ ನಮ್ಮ ಪುರಂದರವಿಠಲ

ಹತ್ತವತಾರ ತಾಳಿದ ಹರಿಯು ತಾನಲ್ಲ

ಉತ್ತರ – ಹುರಿಗೋಲು